


# ನಿವೃತ್ತಿಯ ಡಬಲ್ ಪೆಟ್ಟು

## ಟೆಸ್ಟ್ ಕ್ರಿಕೆಟ್‌ಗೆ ಕಿಂಗ್ ಕೊಹ್ಲಿ – ಹಿಟ್‌ಮ್ಯಾನ್ ರೋಹಿತ್ ವಿದಾಯ

**ವಿರಾಟ್ ಕೊಹ್ಲಿಯನ್ನು ಬೆಂಕಿಗೆ ಹೋಲಿಸಿದರೆ, ರೋಹಿತ್ ಶರ್ಮ ಅವರನ್ನು ಗಾಳಿಗೆ ಸಮೀಕರಿಸಬಹುದು. ಬೆಂಕಿ ಬಿರುಗಾಳಿ ಒಟ್ಟಿಗೆ ಸೇರಿದಂತೆ ಇಬ್ಬರೂ ಎದುರಾಳಿಗಳ ಪಾಲಿಗೆ ದಾವಾನಲ ಎನ್ನುವಂತಹ ಇನಿಂಗ್ಸ್‌ಗಳನ್ನು ಆಡಿರುವುದನ್ನು ಕಂಡಿದ್ದೇವೆ. ಟೆಸ್ಟ್ ಕ್ರಿಕೆಟ್‌ಗೆ ಇಬ್ಬರೂ ಅನಿರೀಕ್ಷಿತವಾಗಿ 'ಗುಡ್‌ಬೈ' ಹೇಳಿದ್ದಾರೆ. ಹೆಚ್ಚು ದುಡಿಮೆ ಬಯಸುವ ಕ್ರಿಕೆಟ್‌ನಲ್ಲಿ ದಿಗ್ಗಜ ಆಟಗಾರರ ಇಂತಹ ವಿದಾಯ ಒಳ್ಳೆಯ ಬೆಳವಣಿಗೆಯಂತೂ ಅಲ್ಲ. ಆದರೂ ಬದಲಾದ ದಿನಗಳನ್ನು ಒಪ್ಪಿಕೊಳ್ಳಬೇಕಿದೆ. ಕೊಹ್ಲಿ, ರೋಹಿತ್ ಟೆಸ್ಟ್ ಬದುಕಿನ ಬೆಂದ ಅನ್ನದ ಕೆಲವು ಅಗುಳುಗಳ ವಿಶ್ಲೇಷಣೆ ಇಲ್ಲಿದೆ.**

**■ ವಿಶಾಖ ಎನ್.**

ನೀಳ ಸಪೂರ ಕಾಯದ ಜೇಮ್ಸ್ ಆ್ಯಂಡರ್‌ಸನ್ ಅವರ ಗುರಿ ನೆಟ್ಟ ಕಣ್ಣುಗಳನ್ನು ನೋಡಿದರೆ ಖುಷಿಯಾಗುತ್ತದೆ. 42ರ ವಯಸ್ಸಿನಲ್ಲಿಯೂ ಒಬ್ಬ ವೇಗದ ಬೌಲರ್ ದೈಹಿಕವಾಗಿ ಅಷ್ಟು ಸಮರ್ಥನಾಗಿರುವುದು ತಮಾಷೆಯಲ್ಲ. ಟೆಸ್ಟ್ ಕ್ರಿಕೆಟ್ ಅನ್ನು ಕಣ್ಣಿಗೆ ಒತ್ತಿಕೊಂಡಂತೆ ಬದುಕಿರುವ ಆ್ಯಂಡರ್‌ಸನ್ ಹಾಗೂ ವಿರಾಟ್ ಕೊಹ್ಲಿ ನಡುವೆ ಕೆಲವು ಮರೆಯಲಾಗದ ಅಧ್ಯಾಯಗಳಿವೆ. 2014ರಲ್ಲಿ ಈ ವೇಗಿ ಕೊಹ್ಲಿ ಅವರನ್ನು ಕಾಡಿದ್ದ ನೆನಪು ಅವುಗಳಲ್ಲಿ ಒಂದು. 2018ರಲ್ಲಿ ಅದೇ ವೇಗಿ ಮುಟ್ಟಿ ನೋಡಿಕೊಳ್ಳುವಂತೆ ಕೊಹ್ಲಿ ಆಡಿದ್ದು ಅದಕ್ಕಿಂತ ಮುಖ್ಯವಾದುದು.

1, 8, 25, 0, 39, 28, 0, 7, 6 ಹಾಗೂ 20 – ಇದು 2014ರಲ್ಲಿ 'ಪಟೌಡಿ ಕಪ್ ಟೆಸ್ಟ್ ಕ್ರಿಕೆಟ್ ಸರಣಿ'ಯಲ್ಲಿ ವಿರಾಟ್ ಕೊಹ್ಲಿ ಗಳಿಸಿದ್ದ ಸ್ಕೋರ್. ಅದೊಂದು ದುಃಸ್ವಪ್ನದಂತಹ ಸರಣಿ. ಜೇಮ್ಸ್ ಆ್ಯಂಡರ್‌ಸನ್ ಬೌಲಿಂಗ್‌ನಲ್ಲೇ ನಾಲ್ಕು ಸಲ ಕೊಹ್ಲಿ ಔಟ್ ಆಗಿದ್ದರು. ಕತ್ತಿಯಂತೆ ಮೊನಚು ಎಂಬ ವಿಶೇಷಣವಿದ್ದ ಕೊಹ್ಲಿ ಬ್ಯಾಟನ್ನು ಇಂಗ್ಲೆಂಡ್ ವೇಗಿಗಳು ಮೊಂಡು ಮಾಡಿದ್ದ ಸರಣಿ ಅದು. ಆಗಿನ್ನೂ 24ರ ಹರೆಯದ ಕೊಹ್ಲಿ